<u>ದಿನಾಂಕ : ***21-03-2025*** ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರವಾಗಿ ಶ್ರೀ. ಎಮ್.ಹೆಚ್ ಎಮ್ ವಕೀಲರಿಂದ</u>

ನಾನು ಈ ಕೆಳಕಂಡ ದಾಖಲೆಗಳನ್ನು ಗುರುತಿಸುತ್ತೇನೆ.

ನಿಪಿ-15 ಃ ವಲಯ ಅರಣ್ಯ ಅಧಿಕಾರಿಯವರಿಗೆ ನೀಡಿದ ಅರ್ಜಿಯ ಪ್ರತಿ

ನಿಪಿ-16 ಃ ಜುಲೈ 2022 ರ ಸಂತೋಷ ಬನ್ನಿಕೊಪ್ಪ ರವರಿಗೆ ಸೇರಿದ ಪೇ ಸ್ಲಿಪ್

ಅರ್ಜಿಯಲ್ಲಿ ಕೋರಿರುವಂತೆ ಆದೇಶ ಮಾಡಬೇಕೆಂದು ಕೋರುತ್ತೇನೆ.

**ಪಾಟೀ ಸವಾಲುಃ 1 ನೇ ಎದರುದಾರರ ಪರ ಶ್ರೀ ಎಸ್ ಎಸ್ ಟಿ ವಕೀಲರಿಂದ**

ನಾನು ಪಿ ಯು ಸಿ ವರೆಗೆ ಓದಿರುತ್ತೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ ಓದಲು ಬರುತ್ತದೆ. 3 ಮತ್ತು 4 ನೇ ಎದುರುದಾರರು ನನ್ನ ಅತ್ತೆ ಮಾವ. ನನ್ನ ತವರು ಮನೆ ಸೂಳೇಭಾವಿ ಗ್ರಾಮ. ಅಪಘಾತವಾದಾಗ ನಾನು ಶಿವಮೊಗ್ಗದಲ್ಲಿ ಇದ್ದೆ. ಮೃತ ವ್ಯಕ್ತಿಯು ಅಪಘಾತವಾದ ದಿನ ಬೆಂಗಳೂರಿಗೆ ಹೋಗುತ್ತೇನೆ ಎಂದು ಹೇಳಿ ಅವರ ಸ್ನೇಹಿತರ ಜೊತೆ ಹೋಗಿದ್ದರು. ಅವರ ಸ್ನೇಹಿತರಾದ 1 ನೇ ಎದರುದಾರರ ಜೊತೆ ಹೋಗಿದ್ದರು. ನನ್ನ ಗಂಡ ಮತ್ತು 1 ನೇ ಎದರುದಾರರು ಇಬ್ಬರು ಒಂದೇ ವಾಹನದಲ್ಲಿ ಹೋಗುತ್ತಿದ್ದರು. 1 ನೇ ಎದರುದಾರರು ಕರೆದಿದ್ದರಿಂದ ನನ್ನ ಗಂಡ ಅವರ ಜೊತೆ ಹೋಗಿದ್ದರು. ಅಪಘಾತವಾದ ವಿಷಯವನ್ನು ಯಾರೋ ತಿಳಿಸಿದ್ದರು. ನಾನು ಅಪಘಾತವಾದ ಜಾಗೆಗೆ ಹೋಗಿರುವುದಿಲ್ಲ. ನನ್ನ ಗಂಡನನ್ನು ನಾನು ಕೊನೆಯಬಾರಿ ಆಸ್ಪತ್ರೆಯಲ್ಲಿ ನೋಡಿರುತ್ತೇನೆ. ಅಪಘಾತವಾದ ಜಾಗೆಯ ಮಾಹಿತಿ ನನಗೆ ಇರುವುದಿಲ್ಲ. 1 ನೇ ಎದರುದಾರರು ತಮ್ಮ ವಾಹನವನ್ನು ಜೋರಾಗಿ ಚಲಾಯಿಸಿದ್ದರಿಂದ ಸದರಿ ಅಪಘಾತವು ಸಂಭವಿಸಿರುತ್ತದೆ. 1 ನೇ ಎದರುದಾರರು ತಮ್ಮ ವಾಹನವನ್ನು ಜೋರಾಗಿ ಮತ್ತು ನಿರ್ಲಕ್ಷತನದಿಂದ ಚಲಾಯಿಸಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಎದರುದಾರರ ವಾಹನಕ್ಕೆ ಯಾವ ವಾಹನ ಡಿಕ್ಕಿ ಪಡಿಸಿರುತ್ತದೆ ಎಂದು ಗೊತ್ತಿರುವುದಿಲ್ಲ. 1 ನೇ ಎದರುದಾರರ ವಾಹನಕ್ಕೆ ಡಿಕ್ಕಿ ಪಡಿಸಿದ ವಾಹನ ಚಾಲಕರನ್ನು ಮತ್ತು ವಾಹನದ ಮಾಲೀಕರನ್ನು ಈ ಪ್ರಕರಣದಲ್ಲಿ ಸೇರಿಸಿರುವುದಿಲ್ಲ. 1 ನೇ ಎದರುದಾರರ ವಾಹನಕ್ಕೆ ಡಿಕ್ಕಿ ಪಡಿಸಿದ ವಾಹನ ಚಾಲಕನಿಂದ ಸದರಿ ಅಪಘಾತವು ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. 1 ನೇ ಎದರುದಾರರ ವಾಹನಕ್ಕೆ ಡಿಕ್ಕಿ ಪಡಿಸಿದ ವಾಹನ ಚಾಲಕನನ್ನು ಮತ್ತು ವಾಹನದ ಮಾಲೀಕನನ್ನು ಉದ್ದೇಶಪೂರ್ವಕವಾಗಿ ಈ ಪ್ರಕರಣದಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಕೇವಲ 1 ನೇ ಎದರುದಾರರಿಂದ ಪರಿಹಾರದ ಹಣವನ್ನು ಪಡೆಯುವದಕ್ಕೊಸ್ಕರ ಈ ಪ್ರಕರಣದಲ್ಲಿ ಅವರನ್ನು ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಎರದುರುದಾರರ ಚಾಲನಾ ಪರವಾನಿಗೆ ಪತ್ರ ಮತ್ತು ವಿಮೆ ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. 1 ನೇ

ಎದರುದಾರರ ವಾಹನಕ್ಕೆ ವಿಮೆ ಇರುವುದರಿಂದ ಕೇವಲ 2 ನೇ ಎದರುದಾರರು ಪರಿಹಾರದ ಹಣವನ್ನು ಕೊಡಲು ಭಾದ್ಯಸ್ತರು ಎಂದರೆ ಸರಿಯಲ್ಲ. 1 ನೇ ಎದುರುದಾರರು ರಸ್ತೆಯ ನಿಯಮಾವಳಿಗಳನ್ನು ಸರಿಯಾಗಿ ಪಾಲಿಸಿ ವಾಹನವನ್ನು ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 3 ನೇ ಎದರುದಾರರು ಮತ್ತು ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಯಿತು ಅವರು ಗೈರು ಹಾಜರಾಗಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ** 2 ನೇ ಎದುರುದಾರರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿರುತ್ತಾರೆ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.

HANAMANTARAO R KULKARNI

Digitally signed by HANAMANTARAO R KULKARNI
Date: 2025.03.22 10:59:26 +0530